
REVIEW OF RESEARCH

ISSN: 2249-894X
IMPACT FACTOR : 3.8014 (UIF)
VOLUME - 6 | ISSUE - 10 | JULY - 2017

# ಹೊಸಗನ್ನಡ ಸಾಹಿತ್ಯ ಮತ್ತು ಶಂಕರ ಮೊಕಾಶಿ ಪುಣೇಕರ



**ಶಿವಶರಣಪ್ಪ ಪಿ.ಎಚ್. ಕೋಡ್ಲಿ**
**ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಸಂಸ್ಥೆ, ಗು.ವಿ. ಗುಲಬರ್ಗಾ**

ಹೊಸಗನ್ನಡ ಸಾಹಿತ್ಯದ ವಿಶಿಷ್ಟ ಬರಹಗಾರರಲ್ಲಿ ಬಹುಮುಖ ಪ್ರತಿಭೆ ಹೊಂದಿದ ಕವಿ, ಕಥೆಗಾರ, ನಾಟಕಕಾರ, ಸಂಗೀತಗಾರ, ವಿಮರ್ಶಕ ಹಾಗೂ ಸಂಶೋಧಕರು, ಹಲವು ಪ್ರಕಾರಗಳಲ್ಲಿ ಸಂಶೋಧನೆ ಮಾಡಿದವರು ಸಾಹಿತ್ಯ ಕ್ಷೇತ್ರದಲ್ಲಿ ಬೆರಳೆಣಿಕೆಯಷ್ಟು ಮಾತ್ರ ಸಿಗುತ್ತಾರೆ. ಕುವೆಂಪು, ದ.ರಾ. ಬೇಂದ್ರೆ, ಕಾರಂತರು, ಅ.ನ.ಕೃ, ವಿ.ಕೃ.ಗೋಕಾಕ, ಗಿರೀಶ ಕಾರ್ನಾಡ. ಪಿ.ಲಂಕೇಶ, ಜಯತೀರ್ಥ ರಾಜಪುರೋಹಿತರಂತಹ, ಸರ್ವಶ್ರೇಷ್ಠ ಲೇಖಕರ ಪಟ್ಟಿಯಲ್ಲಿ ಸ್ಥಾನವನ್ನು ಪಡೆದುಕೊಂಡಿದ್ದಾರೆ.

ಡಾ.ಶಂಕರ ಮೊಕಾಶಿಯಪುಣೀಕರವರಿಗೆ ಕಾದಂಬರಿ ಮತ್ತು ಕಥಾ ಸಾಹಿತ್ಯಕ್ಕೆ ಶಕ್ತಿ ಸಂಚಯವಾಗಿದ್ದು ಅವರ ಕನ್ನಡಾಭಿಮಾನ, ಮಾನವೀಯ ಕಾಳಜಿ ಪ್ರಗತಿಪರ ಧೋರಣೆ ಹಾಗೂ ಬದುಕನ್ನು ಗಾಢ ತನ್ಮತೆಯಲ್ಲಿ ಚಿತ್ರಿಸುವ ಕಥನ ಕೌಶಲ್ಯದಿಂದ ಅವರ ಕಥೆಗಳಲ್ಲಿ ಬದುಕಿನ ಸಕಲ ಮಾಧ್ಯಮಗಳನ್ನು ಸಾಧ್ಯವಾದದ್ದು ನಿರಾಕರಿಸಿದ್ದರಿಂದ ಕಾದಂಬರಿ, ಸಾಹಿತ್ಯ ಹರವು ವಿಶಾಲವಾದ್ದದು. ಅ.ನ.ಕೃ. ಕಾರಂತರ, ಬೈರಪ್ಪನವರಂತಹ ಕಾದಂಬರಿ ದಿಗ್ಗಜರನ್ನು ಸಂಪೂರ್ಣ ನಿರಾಕರಿಸಿದರು ಅಂತಲ್ಲ. ಇವರ ಕಾದಂಬರಿ ಮತ್ತು ಕತೆಗಳು ಮಾನವ ತುಡಿತ ಹಾಗೂ ಮಿಡಿತ  ಹಾಗು ಜನಪರ ಕಾಳಜಿಗಳನ್ನು ಹೊಂದಿ ಮೌನ ಹೋರಾಟವನ್ನು ಮಾಡುತ್ತವೆ.

ಮೊಕಾಶಿಯವರು ಕಾದಂಬರಿ ಕ್ಷೇತ್ರಕ್ಕೆ ನೀಡಿದ ಮೊಟ್ಟ ಮೊದಲ ಕೊಡುಗೆ 'ಗಂಗವ್ವ ಗಂಗಾಮಾಯಿ' 1956 ರಲ್ಲಿ ಪ್ರಕಟವಾದ ಮೊದಲ ಕಾದಂಬರಿ, ಸಾಹಿತ್ಯ ಕ್ಷೇತ್ರದಲ್ಲಿ ಇವರ ಹೆಸರು ಅಚ್ಚಳಿಯದೇ ಉಳಿಸಿದ ಕಾದಂಬರಿ, ಕಥನಕ್ರಿಯೆ ಎರಡು ಭಾಗಗಳಲ್ಲಿ ಮೂವತ್ತೇಳು  ಅಧ್ಯಾಯಗಳಲ್ಲಿ 200 ಪುಟಗಳಷ್ಟು ವಿಸ್ತಾರವಾಗಿ ಬೆಳೆದ ಕಾದಂಬರಿ. ಗಂಗವ್ವ ಎನ್ನುವ ವಿಧವೆ ಕಾಸಿಯಾತ್ರೆಗೆ ಹೋಗಿಬರುವಾಗ ದಾರಿಯ (ರಸ್ತೆ) ನಡು ಮಧ್ಯೆ ಗಂಗಾಜಲವನ್ನು ಚೆಲ್ಲಿ ಬರುವ ಸನ್ನಿವೇಶದಿಂದ ಕಥೆ ಪ್ರಾರಂಭವಾಗುತ್ತದೆ. ತನ್ನ ಮಗನಾದ ಕಿಟ್ಟಿಯನ್ನು ಕಷ್ಟಪಟ್ಟು ಸಾಕಿದಳು ಅವನು ಸಮಾಜದಲ್ಲಿ  ಅತ್ಯುತ್ತಮ ವ್ಯಕ್ತಿಯಾಬೇಕೆಂದು ಕನಸು ಕಂಡಳು. ಕಿಟ್ಟಿಗಾಗಿ ತನ್ನ ಸರ್ವಸ್ವವನ್ನು ತ್ಯಾಗಮಾಡಿದಳು. ಸಾವಿನ ಸಂಕೇತವಾದ (ಗಂಗಾಜಲ) ಜಲವನ್ನು ಚೆಲ್ಲಿದ್ದಾಳೆ. ಮೊದಲ ಅಧ್ಯಾಯ ಸ್ವತಂತ್ರವಾಗಿದ್ದು. ಒಟ್ಟು ಕಾದಂಬರಿಯ ಧೋರಣೆ ಒಂದು ಚಟುಕಿನಲ್ಲಿ ಹೇಳುತ್ತದೆ. ಒಟ್ಟು ಕಥನ ತಂತ್ರ, ಗಂಗವ್ವನ  ಮಗ ಕಿಟ್ಟಿಯ ಸುತ್ತ ಹೆಣೆದ ಕಥೆ ದಾರವಾಡದ ಸುತ್ತಲಿನ ಭಾಷೆಯ ಸೊಗಡನ್ನು ಬಳಸಿರುವರು, ಇನ್ನೊಂದು ಕೇಂದ್ರ ಪ್ರಜ್ಞೆ ರಾಘಪ್ಪ ಆಳದಲ್ಲಿ ಗಂಗವ್ವನ ಯಜಮಾನ ಸ್ವಾಮಿರಾವ ಕೃಷ್ಣಾಜೀ ಕುಲಕರ್ಣಿ ಮತ್ತು  ರತ್ನ, ವ್ಯಾಪರ ಮಾಡುವ ಶ್ರೀಮಂತ ಅವನು ಗಂಗವ್ವನ ತಮ್ಮ ವೆಂಕಟರಾಯನನ್ನು ಉಳಿಸಿಕೊಳ್ಳಲು ಮಾಡಿದ ಉದಾರ ನಡವಳಿಕೆ ಕಾದಂಬರಿಯ ಬೆಳವಣಿಗೆಗೆ ಕಾರಣವಾಗಿದೆ.

ಕಾದಂಬರಿಯ ದುರಂತ ಪಾತ್ರವಾಗಿ ಮೆರೆಯುವ ಗಂಗವ್ವನ ಇನ್ನೊಬ್ಬ ತಮ್ಮ ರಾಘಪ್ಪ ಅಂದಿನ ಕಾಲದ ಜೀವನ ಮೌಲ್ಯಗಳನ್ನು ಏರುಪೇರಾಗಿ ಮಾಡುವ ದೂರ್ತ, ಪುಣೆಯಲ್ಲಿ ತನ್ನ ಸೋಹದರನನ್ನು ಉಳಿಸಿಕೊಳ್ಳಲು ಸ್ವಾಮಿರಾಯನನ್ನು ಪ್ರೇರೆಪಿಸುವ ವ್ಯಕ್ತಿ. ವೆಂಕಟರಾಯನಿಂದ ಎರಡು ಸಾವಿರರೂಪಾಯಿ ಹಾರಿಸಿಕೊಂಡು ಬರುವವನು ಇವನೇ ಕಿಟ್ಟಿಗೆ ತನ್ನ ಮಗಳನ್ನು ಮದುವೆಯಾಗುವಂತೆ ಹೇಳುತ್ತಾನೆ. ತನ್ನ ಆಸ್ಥಿ ಅನ್ಯರ ಪಾಲಾಗದಂತೆ ತನ್ನ ಹೆಂಡತಿಯಿಂದ ಮಗನನ್ನು ಪಡೆಯಲು ಪ್ರಯತ್ನಿಸಿ (ಮಕ್ಕಳಾಗಿರಲಿಲ್ಲ) ವಿಫಲನಾಗಿ ಕೊನೆಗೆ ಸೋತು ಆತ್ಮಹತ್ಯೆಗೆ ಶರಣಾಗುತ್ತಾನೆ. ಈತನ ಪತ್ರದಲ್ಲಿ ಖಳನಾಯಕನನ್ನು ನೆನೆಪು ತರುವಷ್ಟು ಅತಿರೇಕಕ್ಕಾಗಿ ಹೋಗಿರಲಾರದು. ಸಾಯುವಾಗ ರಾಘಪ್ಪ ಒಂದು ಪತ್ರ ಬರೆದು ಸಾಯುತ್ತಾನೆ. ಅವನ ಆಂತರಿಕ

ತುಮುಲುಗಳು ಈ ಪತ್ರದಲ್ಲಿ ಅಡಕವಾಗಿವೆ. ಕಿಟ್ಟಿಯನ್ನು ಬಲಹೀನನ್ನಾಗಿ ಚಿತ್ರಿಸಿರುವರು. ಒತ್ತಾಯ ಪ್ರತಿಕ್ರಿಯೆ, ಸೇಡಿನ ಭಾವನೆ, ಆತ್ಮಹತ್ಯೆ, ನಿಷ್ಕ್ರಿಯತೆ, ಅವಿವೇಕ, ಇವು ಇದರ ಪರಿಣಾಮಗಳಾಗಿವೆ. ಗಂಗವ್ವ ಒಂದು ಛಲಕ್ಕಾಗಿ ತನ್ನ ವ್ಯಕ್ತಿತ್ವವನ್ನು ಬಲಿಕೊಡುವಂತೆ ಚಿತ್ರಿಸಿರುವರು. ಉತ್ತರ ಕರ್ನಾಟಕದ ನುಡಿ ಸಂಪತ್ತನ್ನು ಬಳಸಿರುವರು, ಗಂಗವ್ವ ದೇಸಾಯಿಯರ ಮಾತುಗಳ ರಾಘಪ್ಪನ ನಾಟಕೀಯ ಸಂಭಾಷಣೆ, ಮಹೆಬೂಬಜಾನಳ ಉರ್ದುಮಿಶ್ರಿತ ಕನ್ನಡ, ಕೆಲವು ಪಾತ್ರಗಳ ಬಾಯಿಂದ ಸಂಸ್ಕೃತ ಭಾಷೆಯನ್ನು ಆಡಿಸಿರುವರು. ಇದರಿಂದ ಲೇಖಕರಿಗಿದ್ದ ಸಂಸ್ಕೃತ ಪಾಂಡಿತ್ಯದ ಹಿಡಿತವನ್ನು ಪ್ರದರ್ಶಿಸುತ್ತದೆ, ಅವರ ಶೈಲಿ ಓದುಗರನ್ನು ಕುತೂಹಲ ಕೆರಳಿಸುತ್ತದೆ. ಮಾನವ ಸೌಂದರ್ಯದ ವರ್ಣನೆ, ಪತ್ರ ಶೈಲಿಯ ವೈಶಿಷ್ಟ್ಯ, ರಾಘಪ್ಪನ ಆತ್ಮ ಹತ್ತೆಯ ಪತ್ರ ಓದುಗರ ಹೃದಯವನ್ನು ಆರ್ಧಗೊಳಿಸುವಂತೆ ತಮ್ಮದೆಯಾದ ಶೈಲಿಯಲ್ಲಿ ಚಿತ್ರಿಸಿರುವರು. ಅಚುತರಾಯನ ಮುಂಬಯಿವಾಸ, ತಹಶೀಲ್ದಾರ್ ಆಫೀಸಿನ ವ್ಯವಹಾರಗಳು ಕಾದಂಬರಿಯ ಸಂವೇದನೆಯ ವ್ಯಾಪ್ತಿಯನ್ನು ಹಿಗ್ಗಿಸಲು ಸಹಾಯಕವಾಗಿವೆ. ಇಡೀ ಒಂದು ಕಾಲಮಾನದ ಸಮಸ್ತ ಜನಜೀವನವನ್ನು ತನ್ನ ಸೀಮಿತ ಹಿಡಿತದಲ್ಲಿ ಕಾದಂಬರಿ ಬಲಗೊಳ್ಳಲಿಕ್ಕೆ ಪ್ರಯತ್ನಿಸುತ್ತದೆ. ಜನಾಂಗದ ಅರ್ಥವ್ಯವಸ್ಥೆಗೂ ಜೀವನ ಮೌಲ್ಯವಿಧಾನಕ್ಕೂ ಇರುವ ಸಂಬಂಧಗಳನ್ನು ಸೂಚಿಸುವುದು. ಕಥೆಯ ಮುಖ್ಯ ಪಾತ್ರವಾದ ಕಿಟ್ಟಿಯ ವ್ಯಕ್ತಿತ್ವ ನಿರ್ಮಾಣಕ್ಕೆ ಇರಬಹುದಾದ ಅನುಕೂಲ ಪ್ರತಿಕೂಲವಾದ ಪರಿಸ್ಥಿತಿಯನ್ನೆ ಕುರಿತು ಬರೆಯಲಿ ಕಾದಂಬರಿ ಬರವಣಿಗೆ ವಸ್ತು ನಿಷ್ಠವಾಗಿದೆ. ಈ ಎಲ್ಲಾ ಕಾರಣಗಳಿಂದಲೇ ಸಾಹಿತ್ಯಕ್ಷೇತ್ರಕ್ಕೆ ಉತ್ತಮ ಕೊಡುಗೆಯಾಗಿದೆ.

1980ರ ದಶಕದಲ್ಲಿ 'ನಟನಾರಾಯಣಿ' ಕಾದಂಬರಿ ಪ್ರಕಟವಾಯಿತು, ಒಬ್ಬ ವ್ಯಕ್ತಿಯ ಸುತ್ತ ಹೆಣೆದ ಕಾದಂಬರಿ ಅಲ್ಲದಿದ್ದರೂ ಕಾದಂಬರಿಯ ಕೇಂದ್ರ ಪಾತ್ರ ಆಕ್ರಮಿಸುವ ಅಡಿಗೆ ನಾಣಿ, ಉದಾತ್ತ ನಾಯಕನಂತೆ ಕಾಣುವುದಿಲ್ಲ. ದುರಂತ ನಾಯಕನಂತೆ ತೊರುವುದಿಲ್ಲ, ಸಂಗೀತ ಕಲಿಯಲು ಹೋಗಬೇಕಾದವನು ನಾಟಕ ಕಂಪನಿಯವರ ಕೈಯಲ್ಲಿ ಸಿಕ್ಕಿ ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುವ ದಾರುಣ ಪ್ರಸಂಗವನ್ನು ಕಾದಂಬರಿಕಾರರು ಚಿತ್ರಿಸಿದ್ದಾರೆ. ಅಡಿಗೆ ಮಾಡುವ ನಾಣಿ ಹೆಣ್ಣು ಪಾತ್ರ ನಟನಾಗಿ, ನರ್ತಕನಾಗಿ, ಕೊನೆಗೆ ಚಮೇಲಿಯಾಗಿ 'ಅಫಿಮು' ವ್ಯವಹಾರದಲ್ಲಿ ಸಿಕ್ಕಿಕೊಂಡು ಕೊನೆಗೆ ಇವೆಲ್ಲದರಿಂದ ಬಿಡುಗಡೆ ಹೊಂದಿ, ಕಿರ್ತನಕಾರಾಗಿ ಮಡದಿಮಕ್ಕಳೊಂದಿಗೆ ಸುಖವಾಗಿ ಬಾಳುವೇ ನಡೆಸುವುದೆ ಈ ಕಾದಂಬರಿಯ ವಸ್ತು. ಈ ಕಥೆ ಪತ್ತೇದಾರಿಯ ಸ್ವರೂಪವಾಗಿದೆ. ನಾಟಕ ಕಂಪನಿಯಲ್ಲಿ ವೀರಭದ್ರ ಶೆಟ್ಟಿ, ಝುಬೇದಾಬಾಯಿ, ಚೌಧರಿ ಸಾಹೇಬ, ಕಂದ ಸ್ವಾಮಿ, ಪಾತ್ರಗಳು ಬಂದು ಹೋಗುತ್ತವೆ. ಕಂಪನಿ ಒಳ ವ್ಯವಹಾರಗಳು, ಕಳ್ಳಸಾಗಾಣಿಕೆ, ಸೈನಿಕ ಜೀವನ, ಹಾಗೆ ಕಾದಂಬರಿಗೆ ಮೆರಗನ್ನು ನೀಡುತ್ತದೆ. ಈ ಕಾದಂಬರಿಯ ಮಹತ್ವವನ್ನು ಅರಿತು, 'ಸುಧಾ' ವಾರಪತ್ರಿಕೆಯವರು 'ಪ್ರಶಸ್ತಿ ನೀಡಿ ಗೌರವಿಸಿದರು.

ಅವರ ಮೂರನೆಯ ಪ್ರಖ್ಯಾತ ಕಾದಂಬರಿ 'ಅವಧೇಶ್ವರಿ' ಕೇಂದ್ರ ಸಾಹಿತ್ಯ ಅಕಾಡೆಮಿ ಪಡೆದ ಕಾದಂಬರಿ, ಹಲವು ವರ್ಷಗಳಕಾಲ ಸತತ ಅಧ್ಯಯನ ಅಧ್ಯಾಪನಗಳಿಂದ ರಚಿಸಿದ ಕಾದಂಬರಿ ಸಿಂಧುನಾಗರಿಕತೆಯ ಬಗ್ಗೆ ಅವರು ನಡೆಸಿದ ದೀರ್ಘ ಅಧ್ಯಯನ ಫಲವಾಗಿಯೇ ಈ ಕಾದಂಬರಿ ರಚನೆ ಮಾಡಿದರು. ಕಾದಂಬರಿಕಾರರೆ ತಮ್ಮ ನಿವೇದನೆಯಲ್ಲಿ ಹೇಳುವಂತೆ 'ವಸ್ತು ವೇದ ಕಾಲೀನ ವೆಂದು ನಿರೂಪಣೆಯನ್ನು ವೈಧಿಕ ಭಾಷೆಯಲ್ಲಿ ಮಾಡುವುದು ವ್ಯರ್ಥ, ಎಂಟುನೂರು ವರ್ಷದ ಭಾಷೆಯನ್ನು ಅನುಕರಿಸಲು ಯತ್ನಿಸಿದ ವಾಲ್ಟರ್ ಸ್ಕಾಟ ನಂಥವರು ಇಂದು ಹಾಸ್ಯಸ್ಪದರು. ಎಂದು ಸ್ಪಷ್ಟವಾಗಿ ಹೇಳಿದ್ದಾರೆ.

ಕಥನ ಕ್ರಿಯೆಯಲ್ಲಿ ಅಣ್ಣ–ತಂಗಿಯರನ್ನು ಮದುವೆ ಮಾಡಿಸುವುದರ ಮೂಲಕ (ಈಜಿಪ್ಟ ನಾಗರಿಕತೆ) ಕಥೆ ಪ್ರಾರಂಭಿಸಿ ಅದು ಐರೋಪ್ಯ ದೇಶದ ವಿವಾಹ ಪದ್ಧತಿ ಎಂದು ಹೇಳುತ್ತಾ ಅಣ್ಣ ಪುರುಕುತ್ಸನನ್ನು ಪದಚ್ಯುತಿಗೊಳಿಸಿ, ತಾನೇ ಅಧಿಕಾರ ವಹಿಸಿಕೊಂಡ ಪುರುಕುತ್ಸಾನಿ (ಮಹಾರಾಣಿ)ಯ ಕಥೆ. ಹೇಣ್ಣೊಬ್ಬಳು ಅಸಾಯಕಳಲ್ಲ, ಅವಳು ದಿಟ್ಟ ಮಹಿಳೆ, ಅವಳು ಕೂಡ ರಾಜ್ಯವಾಳಿ ಅನೇಕ (ರಾಜರನ್ನು) ಅರಸರನ್ನು ಸದೆಬಡಿದು, ರಾಜ್ಯಗಳನ್ನು ಒಂದುಗೂಡಿಸುವುದರ ಮೂಲಕ ಹೆಣ್ಣು ಎನ್ನುವ ದೌರ್ಬಲ್ಯವನ್ನು ಮೀರಿ ಕಾದಂಬರಿಕಾರರು ಅವಳನ್ನು ನಿಲ್ಲಿಸಿದ್ದಾರೆ. ರಾಜಕೀಯ ತೊಳಲಾಟ, ಗಂಡು ಹೆಣ್ಣಿನ ಸಂಘರ್ಷ, ಸಿಂಹಭಟ್ಟನೊಂದಿಗೆ ಅನೈತಿಕ ಸಂಬಂಧ, ರಾಜಕೀಯ ದಾಹ, ಭದ್ರಾಯುವಿನ ಮೂಲಕ ಚಿತ್ರಿಸಿದ್ದಾರೆ. ಬ್ರಾಹ್ಮಣ– ಬ್ರಾಹ್ಮಣರ ನಡುವೆ ವರ್ಗ ಸಂಘರ್ಷ, ವರ್ಣ ಸಂಘರ್ಷ, ಪುರುಕುತ್ಸಾನಿ ಕೊನೆಗೊಮ್ಮೆ ಸಿಂಹಭಟ್ಟನ ನಿಂದಲೆ ಅರಸಿಣ ಹಚ್ಚಿಕೊಂಡು ಮತ್ತೈದೆಭಾಗ್ಯ ಪಡೆಯುವುದು, ವಿಧವಾ ವಿವಾಹಕ್ಕೆ ಪ್ರೇರಣೆ ಯಾಗಿದೆ.

ಪುಣೇಕರ ಇನ್ನೊಂದು ಕಾದಂಬರಿ 'ಓಚಿಟಿಚಿ' ಛಿಠಿಟಿಜಿಝುಠಿಟ' ಕನ್ನಡ ನಟ ನಾರಾಯಣಿಯ ಅನುವಾದ ಕಾದಂಬರಿಯಾಗಿದೆ.

ಇವರ ಕೊಡುಗೆ ಕಾದಂಬರಿ ಕ್ಷೇತ್ರಕ್ಕೆ ಸೀಮಿತವಾಗಿರದೆ, ಇವರ ಮೊಟ್ಟ ಮೊದಲ ಕವನ ಸಂಕಲನ ಗಾನಕೇಳಿ (1948), ಕೀರ್ತಿನಾಥ ಮತ್ತು ರೆಣಿಕಲ್ಲರ ಜೊತೆ ಸೇರಿ ಬರೆದ ಕವನವಾಗಿದೆ. 'ವಿಪರ್ಯಾಸ ವಿನೋದ' ನಾಟಕ 1960 ರಲ್ಲಿ ಬರೆದರು ನಾಟಕ, ವಿಮರ್ಶೆ, ಸಂಶೋಧನೆ, ಕತೆಗಳು, ಕನ್ನಡಲ್ಲಿ ಒಟ್ಟು ಹನ್ನೊಂದು ಕೃತಿಗಳು ರಚನೆಮಾಡಿದ್ದಾರೆ. ಕೇವಲ ಕನ್ನಡ ಸಾಹಿತ್ಯದಲ್ಲಿ ಅಲ್ಲದೆ ಇಂಗ್ಲೀಷನಲ್ಲಿ ಹದಿನೆಂಟು ಕೃತಿಗಳನ್ನು ರಚಿಸಿರುವರು.

ಶಂಕರ ಮೊಕಾಶಿಯವರದು ಅದ್ವಿತೀಯವಾದ ಕೊಡುಗೆ, ಇವರ ಕೊಡುಗೆಗೆ ಡಾ. ರಾವ್ ಅವರ ವಿಧಾನವೇ ಮೂಲಾಧಾರವಾದದ್ದು ಅವರಿಗಿಂತ ಬಿನ್ನ ಮಾರ್ಗದಲ್ಲಿ ತಮ್ಮದೆಯಾದ ನಿರ್ಣಯಗಳಿಗೆ ಬಂದದು ಇವರ ಕೊಡುಗೆಯ ವೈಶಿಷ್ಟ್ಯ ಡಾ. ರಾವ್ ಅವರ ಲಿಪಿಯಲ್ಲಿ 22 ಮೂಲಚಿಹ್ನೆಗಳನ್ನು ಗುರುತಿಸಿದ್ದಾರೆ. ಡಾ.ಮೊಕಾಶಿಯವರು ಇನ್ನೂ ಎಂಟು 8 ಹೊಸ ಚಿಹ್ನೆಗಳನ್ನು ಗುರುತಿಸಿರುವರು, 'ವೃಧಿ' ಚಿಹ್ನೆಯನ್ನು ಕಂಡು ಹಿಡಿದಿರುವರು.

ಮೊಕಾಶಿಯವರು ಸಿಂಧು ಬಯಲಿ ನಾಗರಿಕತೆಯ ಲಿಪಿಗಳು 'ಅಕ್ಷಪಾದ' ಎಂಬ ಲಿಪಿಯಿಂದ ಹುಟ್ಟಿರಬೇಕೆಂದು ಸೂಚಿಸಿದ್ದಾರೆ. ಇವರ ಕೊಡುಗೆ ಸಾಹಿತ್ಯ ಕ್ಷೇತ್ರಕ್ಕೆ ಸಿಮೀತವಾಗಿರದೆ, ಸಂಗೀತ ಕ್ಷೇತ್ರದಲ್ಲಿ ವಿಶಿಷ್ಟವಾದ ಕೊಡುಗೆ ಇವರದು 'ಜವಾಹರ' ಮತ್ತು 'ಇಂದಿರೆ' ಎನ್ನುವ ಹೊಸ ರಾಗಗಳನ್ನು ಕಂಡುಹಿಡಿದಿದ್ದಾರೆ, ಕಾದಂಬರಿಕಾರರಾಗಿ, ಕಥೆಗಾರರಾಗಿ, ವಿಮರ್ಶಕರಾಗಿ ಕವಿಯಾಗಿ ಕನ್ನಡ ಸಾಹಿತ್ಯಲೋಕಕ್ಕೆ ಅನುಪಮ ಕೊಡುಗೆ ನೀಡಿರುವರು. ನವೋದಯ ಮತ್ತು ನವ್ಯಗಳ ಮದ್ಯದಲ್ಲಿಯೇ ಅವರು ದಿಟ್ಟ ತನದಿಂದ ನವೋದಯ ಸಾಧನೆಯನ್ನು ಎತ್ತಿಹಿಡಿದಿರುವ ಕವಿ ಎಂದು ಹೇಳಬಹುದು.

**ಅಡಿಟಿಪ್ಪಣೆ:**


1. ಪಾಸ್ವರ ವಿ.ಎಂ.: 1973: ಸಿ.ಎಫ್. ಸಾಹಿತ್ಯದ ಪ್ರಕಾರಗಳು: ಪಿ.ವಿ.ಶಾಸ್ತ್ರಿ ಪ್ರಕಾಶನ ದಾರವಾಡ.
2. ಶೇಷಗಿರಿರಾವ ಎಲ್. ಎಸ್.: 1973: ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ : ಕೆಂಪೆಗೌಡ ಬೆಂಗಳೂರು.
3. ಗೋಪಾಲ ಕೃಷ್ಣಯ್ಯ ಎಲ್. (ಸಂ.): 1993: ಸಾಹಿತ್ಯ ಮತ್ತು ಸಂವಾದ: ಅವಧೇಶ್ವರಿ ಒಂದು ವಿಶ್ಲೇಷಣೆ: ವಿಶ್ರಾಂತ ಪ್ರಕಾಶನ ಬೆಂಗಳೂರು.
4. ಶಂಕರ ಮೊಕಾಶಿ ಪುಣೇಕರ: 1987ಅವಧೇಶ್ವರಿ: ಗೀತಾ ಬುಕ್ ಹೌಸ, ಮೈಸೂರು.
5. ಬಿರಾದಾರ ಎಂ.ಜಿ.(ಸಂ.) 1989 ಕಲಾ ಗಂಗಾ: 'ಅವಧೇಶ್ವರಿ' ಒಂದು ವಿವೇಚನೆ: ಬಸವರಾಜ ನಾಯ್ಕರ್:ಸಂಚಿಕೆ : ಗುಲಬರ್ಗಾ ವಿಶ್ವವಿದ್ಯಾಲಯ,ಗುಲಬರ್ಗಾ
6. ಶಂಕರ ಮೊಕಾಶಿ ಪುಣೇಕರ: ಗಂಗವ್ವ ಗಂಗಾಮಾಯಿ: 1956.
7. ಶಂಕರ ಮೊಕಾಶಿ ಪುಣೇಕರ: ನಟ ನಾರಾಯಣಿ: 1928.
8. ಬಿದರಕುಂದಿ ಶ್ಯಾಮಸುಂದರ(ಸಂ.) 1998: 'ಅವಧೇಶ್ವರಿ ಮೊದಲ ಓದಿದನಂತರ' ಡಾ. ಶಂಕರಮೊಕಾಶಿ ಪುಣೇಕರ: ಅಭಿನಂದನ ಗ್ರಂಥ ಮಾಳಮಡ್ಡಿ ಧಾರವಾಡ–7.